ಅವು ಸ್ಮಶಾನದ ಕಡೆಗೇ ಬಂದವು. ಅಷ್ಟರಲ್ಲಿ ಸಾವರಿಸಿಕೊಂಡಿದ್ದ ಪ್ರದೀಪ್ ಟಾರ್ಚ್ ಬಳಸಿಯಾಗಿತ್ತು. ಅವನೆದುರು ನಾಲ್ಕಾರು ಮುಸುಕುಧಾರಿಗಳು ಕೈಗಳಲ್ಲಿ ದೊಣ್ಣೆಗಳನ್ನು ಹಿಡಿದು ಸಜ್ಜಾಗಿ ನಿಂತಿದ್ದರು. ಆದರೆ ಅವರಿಗೆ ಆಘಾತವಾಗುವಂತೆ ಹತ್ತಿರ ಬರುತ್ತಿದ್ದ ವಾಹನಗಳ ಬೆಳಕು ಪರಿಸರವನ್ನು ಬೆಳಗಿಸುತ್ತಿದ್ದು, ಅದರ ನಿರೀಕ್ಷೆಯಿಲ್ಲದ ಅವರೆಲ್ಲಾ ಕಂಗಾಲಾಗಿದ್ದರು.

ಪ್ರದೀಪನ ಸಂಶಯ ನಿಜವಾಗಿತ್ತು. ಮನುಷ್ಯರೇ ದೆವ್ವಗಳಾಗಿ ಬಂದಿದ್ದರು. ಕಣ್ಣು ಮಿಟುಕಿಸುವುದರಲ್ಲಿ ಜೀಪ್ ಮತ್ತು ವ್ಯಾನ್‌ನಿಂದ ಇಳಿದ ಪೊಲೀಸರ ಕೈಗೆ ಐವರು ಖದೀಮರು ಸೆರೆಯಾಗಿದ್ದರು. ಅವರ ಬಾಯಿ ಬಿಡಿಸಲು ಪೊಲೀಸರಿಗೆ ಕಷ್ಟವಾಗಲಿಲ್ಲ. ಮುಂದಿನ ಎರಡು ಗಂಟೆಗಳ ಕಾರ್ಯಾಚರಣೆಯಲ್ಲಿ ಇನ್ನೂ ಆರು ಜನರು ಸೆರೆಯಾಗಿದ್ದರು. ಬೆಳಗಾಗುವಷ್ಟರಲ್ಲಿ ಅವರೆಲ್ಲರನ್ನೂ ಹೊತ್ತುಕೊಂಡ ವಾಹನಗಳು ಮಂಗಳೂರಿನತ್ತ ಶರವೇಗದಿಂದ ತಲುಪಿಯಾಗಿತ್ತು.

★★★

ರಾಜಕೀಯ ಪುಢಾರಿ ಜಗದೀಶ್ ಶರ್ಮ ಜಿಲ್ಲೆಯಲ್ಲಿ ದೊಡ್ಡ ಹೆಸರು. ಈ ದೆವ್ವದೂರಿಗೂ ಆತನಿಗೂ ಇದ್ದ ಸಂಬಂಧ ಹೆಚ್ಚಿನವರಿಗೆ ತಿಳಿದಿರಲಿಲ್ಲ. ರಾಜಕೀಯ ಪಕ್ಷವೊಂದರ ಮುಖಂಡನಾಗಿದ್ದ ಆತನಿಗೆ ಎದುರು ನಿಲ್ಲುವವರು ಯಾರೂ ಇರಲಿಲ್ಲ. ಆತ ಹೇಳಿದ್ದೇ ಅಂತಿಮ. ತಾಲ್ಲೂಕಿನಲ್ಲಂತೂ ಆತನ ಮಾತನ್ನು ಧಿಕ್ಕರಿಸುವವರ್‍ಯಾರೂ ಇರಲಿಲ್ಲ. ಧನಬಲ, ಜನಬಲದಲ್ಲಿ ಆತನನ್ನು ಮೀರಿಸುವ ಶಕ್ತಿ ಇತರರಿಗಿರಲಿಲ್ಲ. ಕೆಲ ವರ್ಷಗಳಿಂದ ಆತ ಯಾವುದೋ ಬೋರ್ಡಿನ ಅಧ್ಯಕ್ಷನಾಗಿಯೂ ಶೋಭಿಸುತ್ತಿದ್ದ. ತಾಲೂಕಿನ ಸರಕಾರಿ ಕಚೇರಿಗಳಲ್ಲಿ ಆತನ ಮಾತಿಗೆ ಇದಿರುತ್ತರ ಕೊಡುವರೇ ಇರಲಿಲ್ಲ. ಹಾಗಾಗಿ ಆತ ನಡೆದದ್ದೇ ದಾರಿಯಂತಾಗಿತ್ತು.

ಈ ದೆವ್ವದೂರು ಕುಗ್ರಾಮವಾಗುಳಿದದ್ದು ಆತನದ್ದೇ ಕೊಡುಗೆ. ಅದಕ್ಕೆ ಒಳ್ಳೆಯ ಕಾರಣವೂ ಇತ್ತು. ಪಶ್ಚಿಮಘಟ್ಟದ ತಪ್ಪಲಲ್ಲಿದ್ದ ಈ ಊರು ದಟ್ಟ ಅರಣ್ಯದಿಂದ ಕೂಡಿತ್ತು. ಬೆಲೆಬಾಳುವ ಮರಗಳು ಅಲ್ಲಿ ಹೇರಳವಾಗಿದ್ದವು. ಸ್ಮಶಾನದ ಎದುರುಗಡೆಯ ಗುಡ್ಡ, ಬೈಲು ಆತನ ಅಜ್ಜನಿಗೆ ಸೇರಿತ್ತು. ಆ ಆಸ್ತಿಯನ್ನೆಲ್ಲಾ ಆತನೇ ಕಬಳಿಸಿದ್ದ. ಮೊದಲಿನಿಂದಲೂ ಕಳ್ಳತನದಲ್ಲಿ ಆತ ಸಿದ್ಧಹಸ್ತನಾಗಿದ್ದರಿಂದ, ಕಾಡಿನಿಂದ ಮರಗಳನ್ನು ಕಡಿದು ತಂದು ಕೊಯ್ದು ಮಾರಾಟ ಮಾಡಿ ಹಣ ಸಂಪಾದಿಸಿದ್ದ. ನಂತರ ತಾಲ್ಲೂಕು ಕೇಂದ್ರದಲ್ಲಿ ಮನೆ ಮಾಡಿದ್ದನಾದರೂ ಇಲ್ಲಿನ ಚಟುವಟಿಕೆ ಅಭಿವೃದ್ಧಿ ಕಾಣುತ್ತಾ ಬಂದಿತ್ತು. ತನ್ನ ಬಂಟರ ಸುಪರ್ದಿಗೆ ಅದನ್ನು ವಹಿಸಿಕೊಟ್ಟಿದ್ದ.

ಪ್ರದೀಪನಿಗೆ ಕೇಳಿಸಿದ್ದ ಸದ್ದು ಇಲ್ಲಿಂದಲೇ ಬಂದಿತ್ತು. ಮರಗಳನ್ನು ಗರಗಸದಿಂದ ಕೊಯ್ಯುವುದು, ಲಾರಿಗೆ ತುಂಬಿಸುವುದು ಪ್ರಶಾಂತ ವಾತಾವರಣದಲ್ಲಿ ದೂರದವರೆಗೂ ಕೇಳಿಸುತ್ತಿತ್ತು. ಆ ಅಡ್ಡೆ ಆಳವಾದ ಪ್ರಪಾತದಲ್ಲಿದ್ದರಿಂದ ಸ್ಪಷ್ಟವಾಗಿ ಏನೆಂದು ತಿಳಿಯುತ್ತಿರಲಿಲ್ಲ.

ನಿಸರ್ಗ ಸಂಪತ್ತು ಹೇರಳವಾಗಿದ್ದ ಈ ಹಳ್ಳಿಯಲ್ಲಿ ಸರಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದೇ ಅಲ್ಲದೆ, ಕಲ್ಲಿನ ಗಣಿಗಾರಿಕೆ ಮತ್ತಿತರ ಅಕ್ರಮ ವ್ಯವಹಾರಗಳೆಲ್ಲ ಯಾವುದೇ ಅಡೆತಡೆಯಿಲ್ಲದೆ ನಡೆಯುತ್ತಿದ್ದವು. ಹೊರಗಿನವರ್‍ಯಾರೂ ಇತ್ತ ತಲೆ ಹಾಕದೇ ಇರುವುದು ಆತನಿಗೆ ಅಗತ್ಯವಿತ್ತು. ರಾಜಕೀಯ ಪ್ರಭಾವ ಬಳಸಿ ಇಡೀ ಊರಿನಲ್ಲಿ ಪಾಳೇಗಾರಿಕೆ ನಡೆಸುತ್ತಾ, ಸಂಪತ್ತನ್ನು ಲೂಟಿಗೈದು ಧನಿಕನಾಗಿದ್ದನಾತ.

ಆದರೆ ಈ ಅಕ್ರಮ ವಹಿವಾಟು ರಹಸ್ಯವಾಗಿ ನಡೆಯುತ್ತಿದ್ದರೂ ಜನರ ಕಣ್ಣಿಗೆ ಸದಾ ಮಣ್ಣೆರಚಲು ಸಾಧ್ಯವಿರಲಿಲ್ಲ. ಹೀಗಾಗಿ ಬೆದರಿಕೆಯ ತಂತ್ರ ಬಳಸಲಾಯಿತು. ಹಳ್ಳಿ ಜನರು ತಮ್ಮಷ್ಟಕ್ಕೆ ಉಳಿದರು. ಅರಣ್ಯ ಇಲಾಖೆಯರಿಗೆ ತಿಳಿದಾಗ ಲಂಚವು ಪರಿಣಾಮ ಬೀರಿತ್ತು.